






॥ ಜೈ ಶ್ರೀ ಗುರುದೇವ್ ॥

# ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ.)



## ಮಾಹಿತಿ ಪುಸ್ತಕ

## 2019-20





## ಶ್ರೀ ಆದಿಚುಂಚನಗಿರಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

(ನ್ಯಾಕ್ ಸಂಸ್ಥೆಯಿಂದ 'ಬಿ++' ಗ್ರೇಡ್ ಮಾನ್ಯತೆ ಪಡೆದಿದೆ)


ನಾಗಮಂಗಲ, ಮಂಡ್ಯ ಜಿಲ್ಲೆ – 571432




ನಮ್ಮ ಕಾಲೇಜಿನ ಸಹಯೋಗದಲ್ಲಿ ನಡೆದ ಮೈಸೂರು ವಿ.ವಿ.
ಅಂತರ ಕಾಲೇಜು ಅಥ್ಲೆಟಿಕ್ಸ್ ಕ್ರೀಡಾಕೂಟದ ಉದ್ಘಾಟನಾ ಸಮಾರಂಭ





ಕಾಲೇಜಿನ ಅಧ್ಯಾಪಕ ಮತ್ತು ಅಧ್ಯಾಪಕೇತರ ವೃಂದ



ಭೈರವೈಕ್ಯ ಪರಮಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರು
ಸಂಸ್ಥಾಪಕ ಅಧ್ಯಕ್ಷರು, ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ.)



ಪರಮಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು
ಅಧ್ಯಕ್ಷರು, ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ.)



**ಪೂಜ್ಯ ಶ್ರೀ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿಯವರು**

ಪ್ರಧಾನ ಕಾರ್ಯದರ್ಶಿಗಳು, ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ.)




**ಡಾ॥ ಬಿ.ಕೆ. ಲೋಕೇಶ್**, ಎಂ.ಎ. ಪಿಎಚ್.ಡಿ.,

ಪ್ರಾಂಶುಪಾಲರು

## ಕಾಲೇಜಿನ ಪರಿಚಯ

ಇತಿಹಾಸ ಪುರಾಣ ಪ್ರಸಿದ್ಧ ಶ್ರೀ ಆದಿಚುಂಚನಗಿರಿ ಮಠವು ಅನ್ನ ದಾಸೋಹಕ್ಕೆ ಹೆಸರುವಾಸಿಯಾಗಿರುವಂತೆಯೇ ದಿನಾಂಕ 13–12–1973ರಂದು ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ.)ಸ್ಥಾಪಿಸಿ ಜ್ಞಾನ ದಾಸೋಹಕ್ಕೆ ನಾಂದಿಯಾಯಿತು. ಪ್ರಸ್ತುತ ಶಿಕ್ಷಣ ಟ್ರಸ್ಟ್‌ನ ಆಶ್ರಯದಲ್ಲಿ ಪೂರ್ವ ಪ್ರಾಥಮಿಕ ಹಂತದಿಂದ ವೈದ್ಯಕೀಯ–ತಾಂತ್ರಿಕ ಶಿಕ್ಷಣದವರೆಗೆ ದೇಶ–ವಿದೇಶಗಳಲ್ಲಿ ಪ್ರಸರಿಸಿರುವ 498 ಶಿಕ್ಷಣ ಸಂಸ್ಥೆಗಳ ಪೈಕಿ 1975ರಲ್ಲಿ ಸ್ಥಾಪಿತವಾದ ಶ್ರೀ ಆದಿಚುಂಚನಗಿರಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಪ್ರಥಮ ಸ್ಥಾಪಿತ ಸಂಸ್ಥೆಯೆಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು, 41 ವಸಂತಗಳನ್ನು ಯಶಸ್ವಿಯಾಗಿ ಪೂರೈಸಿದೆ.

ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ಸುಸಜ್ಜಿತ ಕಟ್ಟಡದೊಂದಿಗೆ 1975ರಲ್ಲಿ ಪ್ರಾರಂಭವಾದ ಈ ಕಾಲೇಜು ಸಮಾಜಕ್ಕೆ ವಿವಿಧ ಆಯಾಮಗಳಲ್ಲಿ ಸೇವೆ ಸಲ್ಲಿಸುತ್ತಿದೆಯಲ್ಲದೆ, ರಾಷ್ಟ್ರಕ್ಕೆ ಅನೇಕ ಪ್ರತಿಭೆಗಳನ್ನು ಕೊಡುಗೆಯಾಗಿ ನೀಡಿದೆ. ಬಿ.ಎ., ಬಿ.ಕಾಂ. ಪದವಿ ತರಗತಿಗಳೊಂದಿಗೆ ಪ್ರಾರಂಭಗೊಂಡ ಈ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ 108 ರಿಂದ 1041 ತಲುಪಿದೆ. ಜೊತೆಗೆ 2006–2007ರಲ್ಲಿ ಬಿ.ಎಸ್ಸಿ. ಪದವಿಯನ್ನು ಹಾಗೂ 2011–2012ರಲ್ಲಿ ಬಿ.ಬಿ.ಎಂ. ಪದವಿಯನ್ನು ಪ್ರಾರಂಭಿಸಲಾಗಿದೆ. 2014–15ನೇ ಸಾಲಿನಲ್ಲಿ ಬಿ.ಎ. ಪದವಿಯಲ್ಲಿ ಇಂಗ್ಲಿಷ್ ಐಚ್ಛಿಕ ವಿಷಯ ಹಾಗೂ ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ಸ್ನಾತಕೋತ್ತರ ಪದವಿಯನ್ನು (ಎಂ.ಕಾಂ.) ಪ್ರಾರಂಭಿಸಲಾಗಿದೆ.

ಶಿಕ್ಷಣ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಭೈರವೈಕ್ಯ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ಕೃಪಾಶೀರ್ವಾದ ಹಾಗೂ ಪ್ರಸ್ತುತ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿರುವ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿಯವರು ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶ್ರೀ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಈ ಕಾಲೇಜು ಪ್ರವರ್ಧಮಾನಗೊಳ್ಳುತ್ತಿದೆ. ಸೇವಾ ಮನೋಭಾವದ ಪ್ರಾಂಶುಪಾಲರು, ಸಮರ್ಥ ಅಧ್ಯಾಪಕರು ಹಾಗೂ ನೌಕರ ವರ್ಗದವರು ಕಾಲೇಜಿನ ಸರ್ವಾಂಗೀಣ ಪ್ರಗತಿಗಾಗಿ ದುಡಿಯುತ್ತಿದ್ದಾರೆ.

ಪ್ರತಿ ತಾಲ್ಲೂಕು ಕೇಂದ್ರಕ್ಕೆ ಒಂದು ಪ್ರಥಮ ದರ್ಜೆ ಕಾಲೇಜು ಎಂಬ ಸರ್ಕಾರದ ನೀತಿಗೆ ಅನುಗುಣವಾಗಿ ಈ ಕಾಲೇಜು 1988ರಲ್ಲಿ ಶ್ರೀ ಕ್ಷೇತ್ರದಿಂದ ನಾಗಮಂಗಲಕ್ಕೆ ಸ್ಥಳಾಂತರಗೊಂಡಿತು. ಸುಸಜ್ಜಿತ ತರಗತಿ ಕೊಠಡಿಗಳು, ಕಂಪ್ಯೂಟರ್ ಲ್ಯಾಬ್‌ಗಳು, ಅತ್ಯಾಧುನಿಕ ಸೌಲಭ್ಯವುಳ್ಳ ವಿಚಾರ ಸಂಕಿರಣ ಸಭಾಂಗಣ ಹೊಂದಿರುವ ಈ ಕಾಲೇಜು ನ್ಯಾಕ್ ಸಂಸ್ಥೆಯಿಂದ 'ಬಿ++' ಗ್ರೇಡ್ ಮಾನ್ಯತೆಯನ್ನು ಪಡೆದುಕೊಂಡಿದೆ. ಪ್ರತಿಭಾವಂತ ವಿದ್ಯಾರ್ಥಿಗಳನ್ನು ರೂಪಿಸುವುದರ ಮೂಲಕ ಕಾಲೇಜು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಅನೇಕ ರ್‍ಯಾಂಕ್ ಹಾಗೂ ಚಿನ್ನದ ಪದಕಗಳನ್ನು ಗಳಿಸಿಕೊಂಡಿದೆ. 2016ರಲ್ಲಿ ಹೆಚ್. ಎಸ್. ಪ್ರಿಯಾಂಕ ಬಿ.ಎ. ಪದವಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಭೂಗೋಳ ವಿಜ್ಞಾನ ಚಿನ್ನದ ಪದಕವನ್ನು ಪಡೆದಿರುತ್ತಾರೆ. ಅಲ್ಲದೆ ಶ್ರೀ ಡಿ.ಎಂ. ರುದ್ರೇಶ್ ಮೈಸೂರು ವಿಶ್ವವಿದ್ಯಾನಿಲಯದ 2015–16ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ಉ.ಕಾ.

ಸುಬ್ಬರಾಯಾಚಾರ್‌ರವರ ಸ್ಮರಣಾರ್ಥ ಪ್ರಶಸ್ತಿಗೆ ಭಾಜನರಾಗಿರುತ್ತಾರೆ. 55 ಅಧ್ಯಾಪಕರು ಹಾಗೂ 15 ಅಧ್ಯಾಪಕೇತರರು ಶ್ರದ್ಧೆ ಹಾಗೂ ಪ್ರಾಮಾಣಿಕತೆಯಿಂದ ಕರ್ತವ್ಯವನ್ನು ನಿರ್ವಹಿಸುವುದರ ಮೂಲಕ ಈ ಕಾಲೇಜನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುತ್ತಿದ್ದಾರೆ.

## MISSION

To develop physical, mental, moral, social and spiritual qualities of the students.
Upliftment of economically and socially backward classes.
To prepare students to go for higher education.

## VISION

To advance the course of education and diffusion of knowledge without discrimination of caste and creed.
To continue as a distinguished institution fostering an atmosphere of nationalism, secular outlook, scientific temper with humanity, integrity and social concern.
To create human beings full of knowledge, love and respect for society, ready to serve the nation with sacrifice, universal brotherhood and to create an ideal human being.

## CORE VALUES

Academic excellence
Dignity of an individual
Creating oppurtunities for all
Upholding values of honesty and integrity

## GOALS

To impart value-based education to the students.
To bring educational opportunities within the reach of the under privileged section of society.
To ensure participation of students in co-curricular and extra curricular activities for their balanced development.
To stimulate the teachers to continuosly enrich the knowledge for the benefit of the students and for the well-being of society.
To provide infrastructural facilities for the benefits of the students and for the social development of the local community.
To encourage the students to aspire for higher achievements and help them exhibit their latent abilities and realize their cherished goals.



## ಆಡಳಿತ ಮಂಡಳಿ

| | |
|---|---|
| ಪರಮಪೂಜ್ಯ ಜಗದ್ಗುರು<br>ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ | ಅಧ್ಯಕ್ಷರು |
| ಶ್ರೀ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ | ಪ್ರಧಾನ ಕಾರ್ಯದರ್ಶಿಗಳು |
| ಡಾ॥ ಬಿ.ಕೆ. ಲೋಕೇಶ | ಪ್ರಾಂಶುಪಾಲರು ಮತ್ತು ಕಾರ್ಯದರ್ಶಿ |
| ಶ್ರೀ ಶ್ರೀ ಪ್ರಸನ್ನನಾಥ ಸ್ವಾಮೀಜಿ | ಸದಸ್ಯರು |
| ಶ್ರೀ ಶ್ರೀ ಸೋಮೇಶ್ವರನಾಥ ಸ್ವಾಮೀಜಿ | ಸದಸ್ಯರು |
| ಶ್ರೀ ಎಚ್.ಟಿ. ಕೃಷ್ಣೇಗೌಡ | ಸದಸ್ಯರು |
| ಶ್ರೀ ಪ್ರೊ. ರಾಜೇಂದ್ರ | ಸದಸ್ಯರು |
| ಡಾ.ಎಂ.ಪ್ರೀತಿ, ವಿಶ್ವವಿದ್ಯಾನಿಲಯ ನಾಮ ನಿರ್ದೇಶನ | ಸದಸ್ಯರು |
| ಅಧ್ಯಕ್ಷರು, ಪುರಸಭೆ, ನಾಗಮಂಗಲ | ಸದಸ್ಯರು |

## ಅಧ್ಯಾಪಕ ವರ್ಗ

| | |
|---|---|
| ಡಾ॥ ಬಿ.ಕೆ. ಲೋಕೇಶ, ಎಂ.ಎ., ಪಿ.ಎಚ್‌ಡಿ., | ಪ್ರಾಂಶುಪಾಲರು |

**ಕನ್ನಡ ವಿಭಾಗ :**

| | |
|---|---|
| ಡಾ.ಎಂ.ಕೆ.ಮಂಜುನಾಥ, ಎಂ.ಎ., ಎಂ.ಫಿಲ್., ಪಿಹೆಚ್.ಡಿ., | ಸಹಾಯಕ ಪ್ರಾಧ್ಯಾಪಕರು |
| ಡಿ.ಎಸ್.ದಿವ್ಯ, ಎಂ.ಎ., ಎಂ.ಫಿಲ್., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |
| ಪಿ.ಜ್ಯೋತಿಲಕ್ಷ್ಮಿ, ಎಂ.ಎ., ಬಿ.ಇಡಿ, ಕೆ ಸ್ಲೆಟ್., | ಸಹಾಯಕ ಪ್ರಾಧ್ಯಾಪಕರು |

**ಇಂಗ್ಲಿಷ್ ವಿಭಾಗ :**

| | |
|---|---|
| ಎಂ.ಪಿ.ಸುನೀಲ್‌ಕುಮಾರ್, ಎಂ.ಎ, ಕೆ ಸ್ಲೆಟ್., | ಸಹಾಯಕ ಪ್ರಾಧ್ಯಾಪಕರು |
| ಬಿ.ಜೆ.ಶ್ರೀಕಂಠ, ಎಂ.ಎ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |
| ಕೆ.ಅರುಣ್, ಎಂ.ಎ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |
| ಎಸ್.ಎನ್.ಮಂಗಳಮ್ಮ, ಎಂ.ಎ., | ಸಹಾಯಕ ಪ್ರಾಧ್ಯಾಪಕರು |

**ಇತಿಹಾಸ ವಿಭಾಗ :**

| | |
|---|---|
| ಪ್ರೊ.ಬೈರೇಗೌಡ, ಎಂ.ಎ., ಜಿಡಿಸಿ., | ಸಹ-ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು |
| ಎ.ಬಿ.ಪವಿತ್ರ, ಎಂ.ಎ., ಎಂ.ಫಿಲ್, ಕೆ ಸ್ಲೆಟ್., | ಸಹಾಯಕ ಪ್ರಾಧ್ಯಾಪಕರು |
| ಕೆ.ಜೆ.ರವಿವರ್ಮ, ಎಂ.ಎ., ಬಿ.ಇಡಿ, ಕೆ ಸ್ಲೆಟ್., | ಸಹಾಯಕ ಪ್ರಾಧ್ಯಾಪಕರು |

**ಅರ್ಥಶಾಸ್ತ್ರ ವಿಭಾಗ :**

| | |
|---|---|
| ಡಾ.ಬಿ.ಕೆ.ಲೋಕೇಶ, ಎಂ.ಎ., ಪಿಎಚ್.ಡಿ., | ಸಹ-ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು |
| ಟಿ.ಎಂ.ಮೋಹನ್‌ಕುಮಾರ್ ನಾಯ್ಕ್, ಎಂ.ಎ, ಕೆ ಸ್ಲೆಟ್., | ಸಹಾಯಕ ಪ್ರಾಧ್ಯಾಪಕರು |
| ಕೆ.ಪ್ರತಿಮಾ, ಎಂ.ಎ, ಕೆ ಸ್ಲೆಟ್., | ಸಹಾಯಕ ಪ್ರಾಧ್ಯಾಪಕರು |
| ಎಸ್.ಶೋಭಾ, ಎಂ.ಎ., | ಸಹಾಯಕ ಪ್ರಾಧ್ಯಾಪಕರು |

**ರಾಜ್ಯಶಾಸ್ತ್ರ ವಿಭಾಗ :**

| | |
|---|---|
| ಪ್ರೊ. ರಾಮಕೃಷ್ಣೇಗೌಡ, ಎಂ.ಎ., | ಸಹ-ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು |
| ಹೆಚ್.ಎಸ್.ವಿನಯ್‌ಕುಮಾರ್, ಎಂ.ಎ., ಬಿ.ಇಡಿ, ನೆಟ್, ಕೆ ಸ್ಲೆಟ್., | ಸಹಾಯಕ ಪ್ರಾಧ್ಯಾಪಕರು |

**ಸಮಾಜಶಾಸ್ತ್ರ ವಿಭಾಗ :**

| | |
|---|---|
| ಜಿ.ಕೆ.ಕುಮಾರ, ಎಂ.ಎ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |
| ಎಸ್.ಆರ್.ದೇವಾನಂದ, ಎಂ.ಎ., | ಸಹಾಯಕ ಪ್ರಾಧ್ಯಾಪಕರು |

**ಭೂಗೋಳಶಾಸ್ತ್ರ ವಿಭಾಗ :**

| | |
|---|---|
| ಜಿ.ರಾಜಣ್ಣ, ಎಂ.ಎ., | ಸಹಾಯಕ ಪ್ರಾಧ್ಯಾಪಕರು |
| ಡಿ.ಸಿ.ಚೇತನ, ಎಂ.ಎ, ಕೆ ಸ್ಲೆಟ್., | ಸಹಾಯಕ ಪ್ರಾಧ್ಯಾಪಕರು |

**ವಾಣಿಜ್ಯಶಾಸ್ತ್ರ ವಿಭಾಗ :**

| | |
|---|---|
| ಪ್ರೊ.ರಾಜೇಂದ್ರ, ಎಂ.ಕಾಂ., ಡಿ.ಐಟಿ., | ಸಹ-ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು |
| ಎಂ.ಲಲಿತಮ್ಮ, ಬಿ.ಕಾಂ., ಎಲ್.ಎಲ್.ಬಿ., | ಸಹಾಯಕ ಪ್ರಾಧ್ಯಾಪಕರು |



| | |
|---|---|
| ಹೆಚ್.ಆರ್.ತ್ರಿವೇಣಿ, ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| ಬಿ.ಆರ್.ನೀಲಾ, ಎಂ.ಬಿ.ಎ., | ಸಹಾಯಕ ಪ್ರಾಧ್ಯಾಪಕರು |
| ಪಿ.ಸುನೀತ, ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| ಎನ್.ಕೆ.ಹರೀಶ, ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| ಹೆಚ್.ಎಸ್.ಶ್ರೀನಿವಾಸನ್, ಎಂ.ಬಿ.ಎ., | ಸಹಾಯಕ ಪ್ರಾಧ್ಯಾಪಕರು |
| ಸಿ.ಎಸ್.ಚೈತ್ರ, ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| ಪಿ.ಆರ್.ಭಾಗ್ಯಲಕ್ಷ್ಮಿ, ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| ಕೆ.ಸಿ.ವಿದ್ಯಾಶ್ರೀ, ಎಂ.ಕಾಂ, ಕೆ ಸ್ಲೆಟ್., | ಸಹಾಯಕ ಪ್ರಾಧ್ಯಾಪಕರು |
| ಮುಟ್ಟಲಿಂಗಮ್ಮ, ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| ಹೆಚ್.ಎನ್.ಕಾವ್ಯ, ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |
| ಎಂ.ಅರ್ಪಿತ, ಎಂ.ಕಾಂ., | ಸಹಾಯಕ ಪ್ರಾಧ್ಯಾಪಕರು |

**ಭೌತಶಾಸ್ತ್ರ ವಿಭಾಗ :**

| | |
|---|---|
| ಎಸ್.ಬೋರೇಗೌಡ, ಎಂ.ಎಸ್ಸಿ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |
| ಸಿ.ಟಿ.ಚಂದ್ರಶೇಖರ, ಎಂ.ಎಸ್ಸಿ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |

**ರಸಾಯನಶಾಸ್ತ್ರ ವಿಭಾಗ :**

| | |
|---|---|
| ಎಂ.ಆರ್.ನೇತ್ರಾವತಿ, ಎಂ.ಎಸ್ಸಿ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |
| ಸಿ.ಪಲ್ಲವಿ, ಎಂ.ಎಸ್ಸಿ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |

**ಗಣಿತಶಾಸ್ತ್ರ ವಿಭಾಗ :**

| | |
|---|---|
| ಬಿ.ಜಿ.ದೀಪಾ, ಎಂ.ಎಸ್ಸಿ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |
| ಎ.ಜಿ.ಶರತ್‌ಬಾಬು, ಎಂ.ಎಸ್ಸಿ., ಬಿ.ಇಡಿ., | ಸಹಾಯಕ ಪ್ರಾಧ್ಯಾಪಕರು |

**ಗಣಕ ವಿಜ್ಞಾನ ವಿಭಾಗ :**


| | |
|---|---|
| ಎಂ.ಗುಣವತಿ, ಎಂ.ಎಸ್ಸಿ., | ಸಹಾಯಕ ಪ್ರಾಧ್ಯಾಪಕರು |
| ಸಿ.ಆರ್ ನವ್ಯಶ್ರೀ, ಎಂ.ಸಿ.ಎ., | ಸಹಾಯಕ ಪ್ರಾಧ್ಯಾಪಕರು |

**ಗ್ರಂಥಾಲಯ ವಿಭಾಗ :**

| | |
|---|---|
| ಎನ್.ಟಿ. ವಿಜಯಕುಮಾರ, ಎಂ.ಎ., ಎಂ. ಲಿಬ್‌ಸೈನ್ಸ್ | ಗ್ರಂಥಾಲಯ ಮೇಲ್ವಿಚಾರಕರು |

## ಅಧ್ಯಾಪಕೇತರ ವರ್ಗ

| | |
|---|---|
| ಎ.ಸಿ.ಭೀಮಯ್ಯ | ಕಛೇರಿ ಅಧೀಕ್ಷಕರು |
| ಹೆಚ್.ಆರ್.ಪಲ್ಲವಿ, ಎಂ.ಎ, ಬಿ.ಇಡಿ., | ಪ್ರಥಮ ದರ್ಜೆ ಸಹಾಯಕರು |
| ಎಂ.ಎಸ್.ರವೀಂದ್ರಕುಮಾರ್, ಎಂ.ಎಸ್ಸಿ., ಬಿ.ಇಡಿ., | ದ್ವಿತೀಯ ದರ್ಜೆ ಸಹಾಯಕರು |
| ಪಿ.ಜ್ಯೋತಿ, ಎಂ.ಕಾಂ., | ಅಕೌಂಟೆಂಟ್ |
| ಸಿ.ಸಿ.ಜ್ಯೋತಿ, ಎಂ.ಎ., | ಕಂಪ್ಯೂಟರ್ ಅಪರೇಟರ್ |
| ಲೋಕೇಶ | ಸಹಾಯಕರು |
| ದಾಸಯ್ಯ | ಜವಾನರು |
| ಎನ್.ಆರ್.ಲೋಕೇಶ | ಅಟೆಂಡರ್ |
| ಎಂ.ಶಿವನಾಯ್ಕ | ಜವಾನರು |
| ಪಾರ್ವತಮ್ಮ | ಆಯಾ |
| ಛಾಯದೇವಿ | ಆಯಾ |
| ಮಹಾಲಕ್ಷ್ಮಿ | ಆಯಾ |





## ಪ್ರವೇಶದ ನಿಬಂಧನೆಗಳು

1. ಪ್ರವೇಶಕ್ಕಾಗಿ ಅರ್ಜಿ ಫಾರಂನ್ನು ಕಛೇರಿ ಕೆಲಸದ ದಿನಗಳಲ್ಲಿ ನಿಗದಿತ ಶುಲ್ಕವನ್ನು ಭರಿಸಿ ಪಡೆಯಬಹುದು.
2. ಪ್ರವೇಶಕ್ಕಾಗಿ ಭರ್ತಿ ಮಾಡಿದ ಅರ್ಜಿಯನ್ನು ನಿಗದಿತ ದಿನಾಂಕದ ಒಳಗಾಗಿ ಕಾಲೇಜಿನ ಕಛೇರಿಗೆ ತಲುಪಿಸತಕ್ಕದ್ದು.
3. ದೃಢೀಕರಣವಾದ ದಾಖಲಾತಿಗಳು ಇಲ್ಲದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
4. ಲಗತ್ತಿಸಬೇಕಾದ ದಾಖಲಾತಿಗಳು:
   ಅ. ಹಿಂದೆ ಕಲಿತ ಕಾಲೇಜಿನ ವರ್ಗಾವಣೆ ಪತ್ರ (T.C.)
   ಆ. ಅರ್ಹತಾ ಪರೀಕ್ಷೆಯ ಅಂಕಪಟ್ಟಿ
   ಇ. ವಿದ್ಯಾರ್ಥಿ ತಂದೆ-ತಾಯಿ ಅಥವಾ ಪೋಷಕರ ಆದಾಯ ಪ್ರಮಾಣ ಪತ್ರ
   ಈ. ಮೀಸಲಾತಿ ಸಂಬಂಧ ಜಾತಿ ಅಥವಾ ಪಂಗಡ ಅಥವಾ ಆದಾಯ ಪ್ರಮಾಣ ಪತ್ರ.
5. ಅರ್ಜಿಯೊಂದಿಗೆ ಲಗತ್ತಿಸುವ ದಾಖಲಾತಿಗಳು ನಕಲು ಪ್ರತಿಗಳಾಗಿರಬೇಕು. ಮೂಲಪ್ರತಿಗಳನ್ನು ಪ್ರವೇಶ ಸಂದರ್ಭದಲ್ಲಿ ಹಾಜರು ಪಡಿಸಬೇಕು. ಸರ್ಕಾರ ಮತ್ತು ವಿ.ವಿ.ನಿಲಯ ನಿಗದಿಗೊಳಿಸಿದ ಶುಲ್ಕ ಪಾವತಿಸಬೇಕು.
6. ಬೇರೆ ವಿಶ್ವವಿದ್ಯಾನಿಲಯದಿಂದ ಪ್ರವೇಶ ಕೋರುವ ವಿದ್ಯಾರ್ಥಿಯು ವಲಸೆ ಪ್ರಮಾಣ ಪತ್ರವನ್ನು ನೀಡಬೇಕು. (Migration)
7. ವಿದ್ಯಾರ್ಥಿಯು ಅರ್ಜಿಯೊಂದಿಗೆ ಪಾಸ್‌ಪೋರ್ಟ್ ಸೈಜಿನ ಭಾವಚಿತ್ರವನ್ನು ಅಂಟಿಸಬೇಕು ಹಾಗೂ ಪ್ರವೇಶ ಸಂದರ್ಭದಲ್ಲಿ ಬೇಕಾಗಿರುವ ಸ್ಟಾಂಪ್ ಸೈಜಿನ ಭಾವಚಿತ್ರವನ್ನು ನೀಡಬೇಕು.
8. ವಿದ್ಯಾರ್ಥಿಯ ಪ್ರವೇಶವು ಮೈಸೂರು ವಿ.ವಿ. ಅಂಗೀಕಾರವನ್ನು ಪಡೆಯುವ ನಿರ್ಬಂಧಕ್ಕೆ ಒಳಪಟ್ಟಿರುತ್ತದೆ.
9. ಭಾಷೆ ಹಾಗೂ ಐಚ್ಛಿಕ ವಿಷಯಗಳನ್ನು ವಿದ್ಯಾರ್ಥಿಯ ಹಿಂದಿನ ಪರೀಕ್ಷೆಯಲ್ಲಿ ಅಭ್ಯಾಸ ಮಾಡಿರುವ ಪಠ್ಯ ವಿಷಯಕ್ಕೆ ಆಧಾರದ ಮೇಲೆ ಹಾಗೂ ತೆಗೆದುಕೊಂಡಿರುವ ಅಂಕಗಳ ಆಧಾರದ ಮೇಲೆ ನಿಗದಿಪಡಿಸಲಾಗುವುದು.
10. ಪ್ರವೇಶಕ್ಕಾಗಿ ಆಯ್ಕೆಗೊಂಡ ವಿದ್ಯಾರ್ಥಿಗಳ ಹೆಸರನ್ನು ಪ್ರಕಟಣಾ ಫಲಕದಲ್ಲಿ ಸಕಾಲದಲ್ಲಿ ಪ್ರಕಟಿಸಲಾಗುವುದು ಹಾಗೂ ಪ್ರವೇಶ ನೀಡುವ ಹಕ್ಕನ್ನು ಪ್ರಾಂಶುಪಾಲರು ಹೊಂದಿರುತ್ತಾರೆ.
11. ಪ್ರವೇಶ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.
12. ವಿ.ವಿ. ನಿಯಮಾನುಸಾರ ಹಾಗೂ ಸುಪ್ರೀಂ ಕೋರ್ಟ್ ಆದೇಶದಂತೆ ವಿದ್ಯಾರ್ಥಿಯ ಹಾಜರಾತಿಯು ಕನಿಷ್ಠ ಶೇ.75ರಷ್ಟಿರಬೇಕು.
13. ಕಾಲೇಜಿನ ಆವರಣದಲ್ಲಿ ವಿದ್ಯಾರ್ಥಿಗಳು ಫೋನ್ ಬಳಸುವಂತಿಲ್ಲ ಹಾಗೂ ಕಾಲ ಕಾಲಕ್ಕೆ ಕಾಲೇಜಿನಿಂದ ನೀಡುವ ಆದೇಶಗಳನ್ನು ಪಾಲಿಸಬೇಕು.

# ಪ್ರವೇಶಕ್ಕೆ ಅರ್ಹತೆ

ಪದವಿಪೂರ್ವ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಅಭ್ಯರ್ಥಿಗಳು ಪ್ರಥಮ ಬಿ.ಎ./ಬಿ.ಕಾಂ./ಬಿ.ಬಿ.ಎಂ/ಬಿ.ಎಸ್ಸಿ. ತರಗತಿಗಳಿಗೆ ಸೇರಲು ಅರ್ಹರಾಗಿರುತ್ತಾರೆ. ಪದವಿ ತರಗತಿಗಳ ಶಿಕ್ಷಣಾವಧಿಯು ಆರು ಸೆಮಿಸ್ಟರ್‌ಗಳಿಂದ ಕೂಡಿದ್ದು ಮೂರು ಶೈಕ್ಷಣಿಕ ವರ್ಷಗಳನ್ನು ಒಳಗೊಂಡಿರುತ್ತದೆ.

ಮಾಧ್ಯಮ : ಕನ್ನಡ ಮತ್ತು ಇಂಗ್ಲಿಷ್

# ಬೋಧನಾ ವಿಷಯಗಳು

**ಬಿ.ಎ.**

ಗ್ರೂಪ್ 1 ಭಾಷೆಗಳು: ಇಂಗ್ಲಿಷ್, ಕನ್ನಡ, ಸಂಸ್ಕೃತ, ಉರ್ದು
(ಇವುಗಳಲ್ಲಿ ಯಾವುದಾದರೂ ಎರಡು ಭಾಷೆಗಳನ್ನು ಅಭ್ಯಾಸ ಮಾಡಬಹುದು)

ಗ್ರೂಪ್ 2 ಐಚ್ಛಿಕ ವಿಷಯಗಳು:

ಅ. ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ (ಎಚ್.ಇ.ಪಿ.)
ಆ. ಇತಿಹಾಸ, ಅರ್ಥಶಾಸ್ತ್ರ, ಸಮಾಜಶಾಸ್ತ್ರ (ಎಚ್.ಇ.ಎಸ್.)
ಇ. ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ (ಎಚ್.ಇ.ಜಿ.)
ಈ. ಇತಿಹಾಸ, ಇಂಗ್ಲಿಷ್, ಅರ್ಥಶಾಸ್ತ್ರ (ಎಚ್.ಇ.ಇ.)

**ಬಿ.ಕಾಂ.**

ಗ್ರೂಪ್ 1 ಭಾಷೆಗಳು: ಇಂಗ್ಲಿಷ್, ಕನ್ನಡ, ಸಂಸ್ಕೃತ, ಉರ್ದು
(ಇವುಗಳಲ್ಲಿ ಯಾವುದಾದರೂ ಎರಡು ಭಾಷೆಗಳನ್ನು ಅಭ್ಯಾಸ ಮಾಡಬಹುದು)

ಗ್ರೂಪ್ 2 ಐಚ್ಛಿಕ ವಿಷಯಗಳು: ವಿಶ್ವವಿದ್ಯಾನಿಲಯದ ಅಧ್ಯಯನ ಮಂಡಳಿ ಕಾಲಕಾಲಕ್ಕೆ ನಿಗದಿಗೊಳಿಸಿದ ಪಠ್ಯ ವಿಷಯಗಳು

**ಬಿ.ಎಸ್ಸಿ.**

ಗ್ರೂಪ್ 1 ಭಾಷೆಗಳು: ಇಂಗ್ಲಿಷ್, ಕನ್ನಡ, ಸಂಸ್ಕೃತ, ಉರ್ದು
ಗ್ರೂಪ್ 2 ಭೌತಶಾಸ್ತ್ರ, ಗಣಿತಶಾಸ್ತ್ರ, ಕಂಪ್ಯೂಟರ್ ಸೈನ್ಸ್
ಗ್ರೂಪ್ 3 ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ

**ಬಿ.ಬಿ.ಎಂ.**

ಗ್ರೂಪ್ 1 ಭಾಷೆಗಳು: ಇಂಗ್ಲಿಷ್, ಕನ್ನಡ, ಸಂಸ್ಕೃತ, ಉರ್ದು
ಗ್ರೂಪ್ 2 ಐಚ್ಛಿಕ ವಿಷಯಗಳು: ವಿಶ್ವವಿದ್ಯಾನಿಲಯದ ಅಧ್ಯಯನ ಮಂಡಳಿ ಕಾಲಕಾಲಕ್ಕೆ ನಿಗದಿಗೊಳಿಸಿದ ಪಠ್ಯ ವಿಷಯಗಳು



# ವಿದ್ಯಾರ್ಥಿಗಳು ಪಾಲಿಸಬೇಕಾದ ನಿಯಮಗಳು

1. ವಿದ್ಯಾರ್ಥಿಯು ಉತ್ತಮವಾದ ನಡವಳಿಕೆಯನ್ನು ರೂಢಿಸಿಕೊಳ್ಳಬೇಕು.
2. ಎಲ್ಲ ವಿದ್ಯಾರ್ಥಿಗಳು ಪ್ರತಿದಿನ ಬೆಳಿಗ್ಗೆ 10.15 ಗಂಟೆಗೆ ಕಾಲೇಜಿನ ಆವರಣದಲ್ಲಿ ಹಾಜರಿದ್ದು, 10.20ಕ್ಕೆ ನಡೆಯುವ ಸಾಮೂಹಿಕ ಪ್ರಾರ್ಥನೆಯಲ್ಲಿ ತಪ್ಪದೇ ಪಾಲ್ಗೊಳ್ಳಬೇಕು.
3. ಅಧ್ಯಾಪಕರು ಬರುವ ಮುನ್ನವೇ ವಿದ್ಯಾರ್ಥಿಯು ತರಗತಿಯಲ್ಲಿ ಹಾಜರಿರಬೇಕು.
4. ತರಗತಿಗೆ ಬೇಕಾದ ಪಠ್ಯಪುಸ್ತಕ ಹಾಗೂ ಲೇಖನ ಸಾಮಗ್ರಿಗಳನ್ನು ಅಗತ್ಯವಾಗಿ ಹೊಂದಿರಬೇಕು.
5. ತರಗತಿಯ ಪ್ರವೇಶ ಮತ್ತು ನಿರ್ಗಮನವು ಅಧ್ಯಾಪಕರ ಅನುಮತಿಗೆ ಅನುಗುಣವಾಗಿರಬೇಕು.
6. ತರಗತಿಯ ಹಾಜರಾತಿಯು ಕಡ್ಡಾಯವಾಗಿ ಶೇ.75ಕ್ಕಿಂತ ಕಡಿಮೆ ಇರಕೂಡದು.
7. ಕಾಲೇಜು ಆವರಣದಲ್ಲಿ ವಿದ್ಯಾರ್ಥಿಯು ಶಿಸ್ತುಬದ್ಧವಾಗಿ ನಡೆದುಕೊಳ್ಳಬೇಕು.
8. ಕಾಲೇಜಿನ ವೇಳೆಯಲ್ಲಿ ಸಮವಸ್ತ್ರ ಹಾಗೂ ಗುರುತಿನ ಕಾರ್ಡನ್ನು ಕಡ್ಡಾಯವಾಗಿ ಧರಿಸಿರಬೇಕು.
9. ಕಛೇರಿ ವರ್ಗದವರೊಡನೆ ಸೌಜನ್ಯದಿಂದ ವರ್ತಿಸಬೇಕು.
10. ಕಾಲ ಕಾಲಕ್ಕೆ ಪ್ರಕಟಣ ಫಲಕ ಗಮನಿಸಿ ಅಗತ್ಯ ಮಾಹಿತಿ ಪಡೆದುಕೊಳ್ಳಬೇಕು.
11. ಕಾಲೇಜು ಪೀಠೋಪಕರಣ ಹಾಗೂ ವಸ್ತುಗಳನ್ನು ಹಾಳುಮಾಡಬಾರದು.
12. ವಿರಾಮದ ವೇಳೆಯಲ್ಲಿ ಕಾಲೇಜು ವಾಚನಾಲಯವನ್ನು ಬಳಸಿಕೊಳ್ಳಬೇಕು.
13. ಕ್ರೀಡೆ, ಸಾಂಸ್ಕೃತಿಕ, ಎನ್‌ಎಸ್‌ಎಸ್, ಸ್ಕೌಟ್ಸ್ ಮುಂತಾದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು.
14. ಗೋಡೆಗಳ ಮೇಲೆ ಡೆಸ್ಕ್ ಮುಂತಾದವುಗಳ ಮೇಲೆ ಏನನ್ನೂ ಬರೆಯಬಾರದು.
15. ಸುಪ್ರೀಂಕೋರ್ಟಿನ ಆದೇಶದ ಮೇರೆಗೆ ರ್‍ಯಾಗಿಂಗ್ ನಡೆಸಿದ ವಿದ್ಯಾರ್ಥಿಗಳನ್ನು ಶಿಕ್ಷೆಗೆ ಗುರಿಪಡಿಸಲಾಗುವುದು.
16. ವಿವಿಧ ವಿದ್ಯಾರ್ಥಿ ವೇತನಗಳನ್ನು ಪಡೆಯಲು ಅವಕಾಶವಿದೆ. ಎಸ್‌ಸಿ/ಎಸ್‌ಟಿ, ಓಬಿಸಿ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನಗಳು, ಚೆನ್ನಮ್ಮ ವಿದ್ಯಾರ್ಥಿ ವೇತನ, ಸರ್ ಸಿ.ವಿ. ರಾಮನ್ ವಿದ್ಯಾರ್ಥಿ ವೇತನ, ಅಂಗವಿಕಲರ ವಿದ್ಯಾರ್ಥಿ ವೇತನ, ಇತ್ಯಾದಿ. ಸರಿಯಾದ ಸಮಯದಲ್ಲಿ ಅರ್ಜಿಗಳನ್ನು ಸಲ್ಲಿಸಬೇಕು.
17. ಪ್ರತಿಯೊಬ್ಬರು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಖಾತೆಗಳನ್ನು ತೆರೆಯಬೇಕು, ಆಧಾರ್ ಕಾರ್ಡುಗಳನ್ನು ನೀಡಿ ಅದರ ನಂಬರನ್ನು ಬ್ಯಾಂಕಿಗೆ ನೀಡಬೇಕು. ಖಾತೆಯನ್ನು ತೆರೆದು, ನಂಬರ್ ನೀಡದಿದ್ದರೆ ಅವರಿಗೆ ವಿದ್ಯಾರ್ಥಿ ವೇತನ ಲಭ್ಯವಾಗುವುದಿಲ್ಲ.

## ಉದ್ಯೋಗ ಮಾಹಿತಿ ಕೇಂದ್ರ

ಕಾಲೇಜಿನಲ್ಲಿ ಉದ್ಯೋಗ ಮಾಹಿತಿ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ಇದಕ್ಕೆ ಹಿರಿಯ ಪ್ರಾಧ್ಯಾಪಕರೊಬ್ಬರು ಮಾರ್ಗದರ್ಶಕರಾಗಿರುತ್ತಾರೆ. Employment News, Competition Success Review ಪತ್ರಿಕೆಗಳು ಲಭ್ಯವಿರುತ್ತವೆ. ಜಿಲ್ಲಾ ಉದ್ಯೋಗ ವಿನಿಮಯ ಅಧಿಕಾರಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯ ವೃತ್ತಿ ಮಾರ್ಗದರ್ಶನ ವಿಭಾಗದಿಂದ ಉದ್ಯೋಗ ಸಂಬಂಧ ಮಾಹಿತಿ ಹಾಗೂ ಮಾರ್ಗದರ್ಶನ ನೀಡಿ ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳಲು ಸೌಲಭ್ಯ ಕಲ್ಪಿಸಲಾಗುವುದು ಹಾಗೂ ಮಂಡ್ಯದ ಕೃಷಿಕ್ ಫೌಂಡೇಶನ್ ವತಿಯಿಂದ ಸ್ಪರ್ಧಾತ್ಮಕ ತರಬೇತಿಗೆ ಪ್ರವೇಶಾವಕಾಶ ನೀಡಲಾಗುವುದು.

## ಸಾಂಸ್ಕೃತಿಕ ಕಾರ್ಯಕ್ರಮಗಳು

ಕಾಲೇಜಿನಲ್ಲಿ ಪ್ರತ್ಯೇಕವಾದ ಸಾಂಸ್ಕೃತಿಕ ಸಮಿತಿ ಇದೆ. ಇದರ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಭಾವಗೀತೆ, ಜನಪದ ಗೀತೆ, ಚಿತ್ರಗೀತೆ, ಏಕಪಾತ್ರಾಭಿನಯ, ಚರ್ಚಾಸ್ಪರ್ಧೆ ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸಿ ವಿದ್ಯಾರ್ಥಿಗಳ ಕೌಶಲತೆಯನ್ನು ಹೆಚ್ಚಿಸಲಾಗುವುದು. ಅಲ್ಲದೆ ಇತರೆ ಕಾಲೇಜುಗಳಲ್ಲಿ ನಡೆಯುವ ಸ್ಪರ್ಧಾ ಕಾರ್ಯಕ್ರಮಕ್ಕೆ ನಿಯೋಜಿಸಲಾಗುವುದು. ಕಾಲೇಜಿನಲ್ಲಿ ರಾಷ್ಟ್ರೀಯ ಹಬ್ಬಗಳು, ಪ್ರಾರಂಭೋತ್ಸವ, ವಾರ್ಷಿಕೋತ್ಸವ, ಪ್ರತಿಭಾ ದಿನಾಚರಣೆಗಳನ್ನು ವಿಶೇಷವಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಗುವುದು.

## ರಾಷ್ಟ್ರೀಯ ಸೇವಾ ಯೋಜನೆ

ಕಾಲೇಜಿನಲ್ಲಿ ಎರಡು ರಾ.ಸೇ.ಯೋ. ಘಟಕಗಳಿದ್ದು, 200 ವಿದ್ಯಾರ್ಥಿಗಳನ್ನು ನೋಂದಾಯಿಸಲು ಅವಕಾಶವಿದೆ. ವಿದ್ಯಾರ್ಥಿ/ವಿದ್ಯಾರ್ಥಿನಿಯರು ಸ್ವಯಂಸೇವಕರಾಗಿ ಹೆಸರು ನೋಂದಾಯಿಸಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ವಿಶ್ವವಿದ್ಯಾನಿಲಯ ಹಾಗೂ ರಾಷ್ಟ್ರಮಟ್ಟದಲ್ಲಿ ಕೀರ್ತಿಗಳಿಸಲು ಸಾಧ್ಯವಾಗುತ್ತದೆ. ಶಿಸ್ತು ಮತ್ತು ಸೇವೆ ಇದರ ಪ್ರಮುಖ ಗುರಿಯಾಗುತ್ತದೆ. ಆ ಮೂಲಕ ಸಮಾಜ ಹಾಗೂ ರಾಷ್ಟ್ರಕ್ಕೆ ಅಮೂಲ್ಯ ಸೇವೆಯನ್ನು ಸಲ್ಲಿಸಬಹುದು.

## ಸ್ಕೌಟ್ಸ್ ಮತ್ತು ಗೈಡ್ಸ್ ವಿಭಾಗ

ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಭಾರತ್ ಸ್ಕೌಟ್ಸ್ ಮತ್ತು ವಿದ್ಯಾರ್ಥಿನಿಯರಿಗೆ ಗೈಡ್ಸ್ ವಿಭಾಗಗಳಿವೆ. ವಿದ್ಯಾರ್ಥಿ/ವಿದ್ಯಾರ್ಥಿನಿಯರು ಹೆಸರನ್ನು ನೋಂದಾಯಿಸಿಕೊಂಡು ಈ ಯೋಜನೆ ಅಡಿಯಲ್ಲಿ ಸ್ವಯಂಸೇವಕರಾಗಿ ದೇಶಕ್ಕೆ ನಿಸ್ವಾರ್ಥ ಸೇವೆ ಸಲ್ಲಿಸಬಹುದಾದ ಅವಕಾಶ ದೊರೆಯಲಿದೆ.

## ಗ್ರಂಥಾಲಯ ಸೌಲಭ್ಯ

ನಮ್ಮ ಕಾಲೇಜಿನಲ್ಲಿ ಉತ್ತಮ ಗುಣಮಟ್ಟದ ಸುಸಜ್ಜಿತವಾದ ಗ್ರಂಥಾಲಯವಿದ್ದು ಎಲ್ಲಾ ವಿಷಯಗಳಿಗೆ ಸಂಬಂಧಿಸಿದ 25000ಕ್ಕೂ ಹೆಚ್ಚು ಪುಸ್ತಕಗಳಿವೆ, ಅಲ್ಲದೆ ಪ್ರತ್ಯೇಕ ವಾಚನಾಲಯವಿದ್ದು ರಾಜ್ಯ ಮತ್ತು ರಾಷ್ಟ್ರಮಟ್ಟದ ಇಂಗ್ಲಿಷ್ ಮತ್ತು ಕನ್ನಡ ದಿನಪತ್ರಿಕೆಗಳನ್ನು, ವಿವಿಧ ವಿಷಯಗಳಿಗೆ ಸಂಬಂಧಪಟ್ಟ ನಿಯತಕಾಲಿಕಗಳನ್ನು ವಿದ್ಯಾರ್ಥಿಗಳ ಅನುಕೂಲಕ್ಕೆ ಒದಗಿಸಲಾಗಿದೆ.



1. ಕೆಲಸದ ದಿನಗಳಲ್ಲಿ ಗ್ರಂಥಾಲಯವು ಬೆಳಿಗ್ಗೆ 9.00ರಿಂದ 5.00ರ ವರೆಗೆ ತೆರೆದಿರುತ್ತದೆ.
2. ವಿದ್ಯಾರ್ಥಿಯು ಒಂದು ಸಲ ಎರಡು/ಮೂರು ಪುಸ್ತಕಗಳನ್ನು ಪಡೆಯಬಹುದು.
3. ವಿದ್ಯಾರ್ಥಿಯು ಕಾಲೇಜಿನ ಗುರುತಿನ ಚೀಟಿಯನ್ನು ಹೊಂದಿರಬೇಕು.
4. ಗ್ರಂಥಾಲಯದಲ್ಲಿ ಸದಾ ನಿಶ್ಯಬ್ದತೆಯನ್ನು ಕಾಪಾಡಬೇಕು.
5. ಪುಸ್ತಕದ ಸದುಪಯೋಗವನ್ನು ಕಡ್ಡಾಯವಾಗಿ ಪಡೆದುಕೊಳ್ಳತಕ್ಕದ್ದು.
6. ಪುಸ್ತಕವನ್ನು ನಿಗದಿಗೊಳಿಸಿದ ದಿನದಂದು ಗ್ರಂಥಾಲಯಕ್ಕೆ ಹಿಂದಿರುಗಿಸಬೇಕು. ಇಲ್ಲವಾದಲ್ಲಿ ದಂಡ ವಿಧಿಸಲಾಗುವುದು.

## ಕ್ರೀಡಾ ಚಟುವಟಿಕೆಗಳು

ಕಾಲೇಜು ವಿಶಾಲವಾದ ಕ್ರೀಡಾಂಗಣವನ್ನು ಹೊಂದಿದ್ದು, ಪುರುಷರಿಗಾಗಿ ಕಬಡ್ಡಿ, ವಾಲಿಬಾಲ್, ಬ್ಯಾಡ್ಮಿಂಟನ್, ಷಟಲ್, ಟೇಬಲ್ ಟೆನಿಸ್, ಚೆಸ್, ಖೋ ಖೋ, ಕ್ರಿಕೆಟ್ ಹಾಗೂ ಅಥ್ಲೆಟಿಕ್ಸ್, ಮಹಿಳೆಯರಿಗಾಗಿ ಥ್ರೋಬಾಲ್, ಖೋ ಖೋ, ಅಥ್ಲೆಟಿಕ್ಸ್ ಮುಂತಾದ ಕ್ರೀಡಾ ಚಟುವಟಿಕೆಗಳಿಗೆ ಉತ್ತಮ ಅವಕಾಶವಿದೆ. ಪ್ರತಿನಿತ್ಯ ಸೂಕ್ತ ತರಬೇತಿ ನೀಡುವುದರ ಮುಖಾಂತರ ವಿದ್ಯಾರ್ಥಿಗಳನ್ನು ಉತ್ತಮ ಕ್ರೀಡಾಪಟುಗಳಾಗಿ ರೂಪಿಸಲಾಗುವುದು.

## ಲಭ್ಯವಿರುವ ವಿಶಿಷ್ಟ ಸೌಲಭ್ಯಗಳು

1. ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗ
2. ರ್‍ಯಾಗಿಂಗ್ ನಿಗ್ರಹ ಕೋಶ (1800-180-5522)
3. ಹಿರಿಯ ವಿದ್ಯಾರ್ಥಿ ಸಂಘ
4. ಸಂಬಂಧಪಟ್ಟ ವಿಷಯಗಳ ವೇದಿಕೆಗಳು
5. ಭೂಗೋಳ ವಿಜ್ಞಾನ ಪ್ರಯೋಗಶಾಲೆ
6. ವಿಜ್ಞಾನ ವಿಭಾಗದ ಪ್ರಯೋಗಶಾಲೆಗಳು, ಇತ್ಯಾದಿ

## ರ್‍ಯಾಂಕ್ ಹಾಗೂ ಚಿನ್ನದ ಪದಕದ ವಿಜೇತರು

1. **ವೈ.ಬಿ. ಪುಟ್ಟಸ್ವಾಮಿ, ಬಿ.ಎ., –** (1981) ಚಿನ್ನದ ಪದಕ (ಭೂಗೋಳಶಾಸ್ತ್ರ)
2. **ಎಚ್.ಆರ್. ಮರಿಸ್ವಾಮಿ, ಬಿ.ಎ., –** (1986) 8ನೇ ರ್‍ಯಾಂಕ್ (ಎಚ್.ಇ.ಎಸ್.)
3. **ಡಿ. ಗಿರೀಶ, ಬಿ.ಎ., –** (2001) ಚಿನ್ನದ ಪದಕ (ಭೂಗೋಳಶಾಸ್ತ್ರ)
4. **ಟಿ.ಎಸ್. ನರಸಿಂಹಮೂರ್ತಿ, ಬಿ.ಎ., –** (2002) 2ನೇ ರ್‍ಯಾಂಕ್ (ಎಚ್.ಇ.ಜಿ.)
5. **ಕೆ.ಬಿ. ಯೋಗಾನಂದ, ಬಿ.ಎ., –** (2003) ಚಿನ್ನದ ಪದಕ ಮತ್ತು ನಗದು ಬಹುಮಾನ
6. **ಎಚ್.ಎಸ್. ಪ್ರಿಯಾಂಕ್, ಬಿ.ಎ., –** (2016) ಭೂಗೋಳ ವಿಜ್ಞಾನ ಚಿನ್ನದ ಪದಕ

## ರಾಷ್ಟ್ರೀಯ ಸೇವಾ ಯೋಜನೆ

7. ಡಿ.ಎಂ. ರುದ್ರೇಶ್ – ಉ.ಕಾ. ಸುಬ್ಬರಾಯಾಚಾರ್‌ರವರ ಸ್ಮರಣಾರ್ಥ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾನಿಲಯ (2015-16)

## CALENDER OF EVENTS
## FOR THE ACADEMIC YEAR 2019-20

| Sl. No | Particulars | Dates for 2019-20 |
|---|---|---|
| 1. | Re-opening of Colleges for the academic year 2019-20 (Teaching Faculty should assist the admission process) | 10-06-2019 |
| 2. | Commencement of all odd semester classes (I, III & V semester/ I, II, III year) | 17-06-2019 |
| 3. | Last date for admission for Ist semester | 01-07-2019 |
| 4. | Last date for admission with penal fee | 08-07-2019 |
| 5. | Last working day of the odd semester programmes | 14-10-2019 |
| 6. | Mid-term vacation (including conducting of examination and valuation work of odd semesters) | 15-10-2019 to 30-11-2019 |
| 7. | Commencement of odd semester examinations | 17-10-2019 |
| 8. | Commencement of all even semester classes (II, IV and VI semesters/ I, II and III year) | 02-12-2019 |
| 9. | Last working day of even semester programmes | 31-03-2020 |
| 10. | Summer vacation (including conducting of examination and valuation work of even semesters) | 01-04-2020 to 31-05-2020 |
| 11. | Commencement of even semester examinations | 06-04-2020 |
| 12. | Re-opening of Department/College for the Academic Year 2020-21. | 01-06-2020 |





ರಸಾಯನಶಾಸ್ತ್ರ ಪ್ರಯೋಗಾಲಯ




ಭೌತಶಾಸ್ತ್ರ ಪ್ರಯೋಗಾಲಯ



ಕಂಪ್ಯೂಟರ್ ಲ್ಯಾಬ್‌ನಲ್ಲಿ ಅಧ್ಯಯನ ನಿರತ ವಿದ್ಯಾರ್ಥಿಗಳು




ಗ್ರಂಥಾಲಯದಲ್ಲಿ ಅಧ್ಯಯನಶೀಲ ವಿದ್ಯಾರ್ಥಿಗಳು




ಪೋಷಕರ ಸಭೆ



ನಮ್ಮ ಕಾಲೇಜಿನ ಎನ್.ಎಸ್.ಎಸ್. ಸ್ವಯಂ ಸೇವಕರಿಂದ ಶ್ರಮದಾನ




ಜ್ಞಾನ-ವಿಜ್ಞಾನ ವಸ್ತುಪ್ರದರ್ಶನ ಮೇಳದಲ್ಲಿ
ಬಹುಮಾನ ಗಳಿಸಿದ ನಮ್ಮ ವಿದ್ಯಾರ್ಥಿಗಳಿಗೆ ಪರಮಪೂಜ್ಯರಿಂದ ಅಭಿನಂದನೆಗಳು



ಸಾಮೂಹಿಕ ಪ್ರಾರ್ಥನೆಗೆ ಸಜ್ಜಾಗಿರುವ ವಿದ್ಯಾರ್ಥಿಗಳ ಸಮೂಹ